**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**
**ಹಾಗೂ ಎಫ್.ಟಿ.ಎಸ್.ಸಿ-1, ಹಾವೇರಿ**
**ಎಸ್.ಸಿ.18/2020**

PW- 08
CW-13

| | |
|---|---|
| ಸಾಕ್ಷಿದಾರರ ಹೆಸರುಃ | ಕೃಷ್ಣ ಮಾಳವದೆ |
| ತಂದೆಯ ಹೆಸರುಃ | ಮುರುಳಿಧರ |
| ವಯಸ್ಸುಃ | 52 ವರ್ಷ |
| ಉದ್ಯೋಗಃ | ದರ್ಜಿ |
| ಹಾಲಿ ವಾಸ ಸ್ಥಳಃ | ಮಾರುಕಟ್ಟೆ ರಸ್ತೆ , ಶಿಗ್ಗಾಂವ |

**ದಿನಾಂಕ: 25.10.2024 ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ

ಮೃತ ಶಾಂತಾಬಾಯಿ ನನ್ನ ದೊಡ್ಡಮ್ಮ. ಚಾಸಾ-1 , 14 , 15 ನನ್ನ ಮಾವಂದಿರು. ಚಾಸಾ-16 ನನ್ನ ಅತ್ತೆ. ಚಾಸಾ-17, 18 ನನ್ನ ಅಳಿಯಂದಿರು. ಚಾಸಾ-8 ರಿಂದ 10 ನನಗೆ ಸಂಬಂದದಲ್ಲಿ ಸಹೋದರರು. ಚಾಸಾ-12 ಸಂಬಂದದಲ್ಲಿ ನನ್ನ ಸಹೋದರಿ. ನಮ್ಮ ಮನೆ ಶಿಗ್ಗಾಂವ ಪಟ್ಟಣದ ಮಾರುಕಟ್ಟೆ ರಸ್ತೆಯಲ್ಲಿರುತ್ತದೆ. ನನ್ನ ದೊಡ್ಡಮ್ಮ ಸಾಯುವ ಮುನ್ನ ಮಾರುಕಟ್ಟೆ ರಸ್ತೆಯ ನಮಗೆ ಸೇರಿದ ಹಿರಿಯರ ಮನೆಯಲ್ಲಿ ಒಬ್ಬಳೇ ವಾಸವಾಗಿರುತ್ತಿದ್ದಳು. ಅವರ ಗಂಡು ಮಕ್ಕಳೆಲ್ಲರೂ ಹೋಗಿ ಬಂದು ಮಾಡಿ ಅವಳ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು. ಚಾಸಾ-12 ಪ್ರತಿದಿನ ಮೃತ ದೊಡ್ಡಮ್ಮಳಿಗೆ ಕರೆ ಮಾಡಿ ಯೋಗಕ್ಷೇಮ ವಿಚಾರಿಸುತ್ತಿದ್ದಳು.

ತಾಃ 17.08.2019 ರಂದು ಮುಂಜಾನೆ 8.15 ಕ್ಕೆ ಚಾಸಾ-12 ರವರು ನನಗೆ ಪೋನ ಕರೆ ಮಾತನಾಡಿ ನನ್ನ ದೊಡ್ಡಮ್ಮ ಪೊನ ತೆಗೆಯುತ್ತಿಲ್ಲ ನೋಡಿಕೊಂಡು ಬರುವಂತೆ ಹೇಳಿದಳು. ನಾನು ನನ್ನ ದೊಡ್ಡಮ್ಮ ಮನೆಯ ಒಳಗಡೆ ಹೋಗಿ ನೋಡಿದಾಗ ಅರ್ಧ ಬಾಗಿಲು ತೆಗೆದಿದ್ದು, ನನ್ನ ದೊಡ್ಡಮ್ಮ ದಿನಾಲು ಮಲಗುವ ಮಂಚದಲ್ಲಿ ಅಂಗಾತವಾಗಿ ಮಲಗಿದ್ದ ಸ್ಥಿತಿಯಲ್ಲಿದ್ದಳು. ಅವಳ ಎರಡು ಕೈಗಳನ್ನು ಸೀರೆಯಿಂದ ಮಂಚಕ್ಕೆ ಕಟ್ಟಲಾಗಿತ್ತು. ಅವಳ ಕುತ್ತಿಗೆಯನ್ನು ಸೀರೆಯಿಂದ ಬಿಗಿಯಲಾಗಿತ್ತು. ಸದರಿ ಸೀರೆಯಿಂದ ಅವಳ ಕಣ್ಣುಗಳನ್ನು ಕಟ್ಟಲಾಗಿತ್ತು. ನನ್ನ ದೊಡ್ಡಮ್ಮನ ಬಟ್ಟೆಗಳು ಅಸ್ತವ್ಯಸ್ತವಾಗಿದ್ದವು. ನನ್ನ ತಾಯಿಯ ಎಡ ಕಪಾಳದ ಮೇಲೆ ಗಾಯವಾಗಿದ್ದು, ಬಾಯಿಯಿಂದ ರಕ್ತ ಸೋರಿಕೆಯಾಗಿತ್ತು. ಮಂಚದ ಪಕ್ಕ ನನ್ನ ರಕ್ತ ಹತ್ತಿದ್ದ ತಲೆದಿಂಬು ಬಿದ್ದಿತ್ತು. ನನ್ನ ದೊಡ್ಡಮ್ಮಳ ಬಳೆಗಳು ಒಡೆದು ಚೆಲ್ಲಾಪಿಲ್ಲಿಯಾಗಿದ್ದವು. ನನ್ನ ದೊಡ್ಡಮ್ಮಳ ಮೈಮೇಲೆ ಧರಿಸುತ್ತಿದ್ದ ಕೈಯಲ್ಲಿಯ 4 ಚಿಕ್ಕ ಬಂಗಾರದ ಬಳೆಗಳು, 2 ದೊಡ್ಡ ಬಂಗಾರದ ಬಳೆಗಳು, ಕತ್ತಲ್ಲಿದ್ದ ಚೈನ ಸರ ಒಡವೆಗಳು ಮೈ ಮೇಲೆ ಇರಲಿಲ್ಲ. ಸದರಿ ಮನೆಯಲ್ಲಿ ನನ್ನ ಚಾಸಾ-8 ರವರು ಇದ್ದ ಅವನು ಗಾಭರಿಯಾಗಿದ್ದ. ಸ್ವಲ್ಪ ಹೊತ್ತಿನ ನಂತರ ನನ್ನ ಉಳಿದ ಸಹೋದರರು ಮತ್ತು ಸಂಬಂಧಿಕರು ಬಂದರು. ನನ್ನ ದೊಡ್ಡಮ್ಮನ ಸ್ಥಿತಿಯನ್ನು ನೋಡಿ ಯಾರೋ

ದುಷ್ಕರ್ಮಿಗಳು ನನ್ನ ದೊಡ್ಡಮ್ಮಳ ಬಂಗಾರದ ಒಡವೆಗಳಿಗಾಗಿ ನನ್ನ ದೊಡ್ಡಮ್ಮಳನ್ನು ಕೊಲೆ ಮಾಡಿರುತ್ತಾರೆಂದು ನಮಗೆ ತಿಳಿದುಬಂದಿರುತ್ತದೆ. ನಾನು, ಚಾಸಾ-8 ರವರಿಗೆ ಪೊನ ಮಾಡಿ ಹೇಳಲಾಗಿ, ಸದರಿಯವನು ಸ್ಥಳಕ್ಕೆ ಬಂದನು. ನಂತರ ಚಾಸಾ-8 ರವರು ಉಳಿದ ಸಹೋದರರಿಗೆ ಮತ್ತು ಸಂಬಂಧಿಕರಿಗೆ ಪೊನ ಕರೆ ಮಾಡಿ ಬರುವಂತೆ ಹೇಳಿದರು. ನಂತರ ಎಲ್ಲರೂ ಬಂದರು. ನಂತರ ಒಳಗಿನ ಕೋಣೆಗಳಿಗೆ ಹೋದಾಗ ಮನೆಯಲ್ಲಿ ಗ್ಯಾಸ ವಾಸನೆ ಹರಡಿಕೊಂಡಿತ್ತು. ಗ್ಯಾಸ ಸೀಲಿಂಡರ್ ನ ಪೈಪ್ ಬಿಚ್ಚಲಾಗಿತ್ತು. ಹೊಸ್ತಿಲಿನ ಮೇಲೆ ಹಚ್ಚಿದ ಹಿತ್ತಾಳೆಯ ದೀಪ ಆರಿತ್ತು. ಸದರಿ ದೀಪದ ಪಕ್ಕದಲ್ಲಿ ಬೆಂಕಿಪೊಟ್ಟಣ ಬಿದ್ದಿತ್ತು. ನಂತರ ಚಾಸಾ-1 ರವರು ಶಿಗ್ಗಾಂವ ಪೋಲಿಸರಿಗೆ ದೂರನ್ನು ನೀಡಿದರು. ಪೋಲಿಸರು ಅದೇ ದಿನ ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಮಾಡಿಕೊಂಡಿರುತ್ತಾರೆ.

ನಾನು ಪೋಲಿಸರಿಗೆ ಹೇಳಿಕೆ ಕೊಟ್ಟ ನಂತರ ಚಾಸಾ-12 ನನ್ನ ಮುಂದೆ, ನನ್ನ ದೊಡ್ಡಮ್ಮ ಸಾಯುವ ಮುನ್ನ ಆರೋಪಿ ಮತ್ತು ಅವನ ಹೆಂಡತಿ ಒಂದು ವಾರದಿಂದ ನನ್ನ ದೊಡ್ಡಮ್ಮ ವಾಸವಿದ್ದ ಮನೆಗೆ ಬಂದು ಮನೆಯ ಅಟ್ಟವನ್ನು ಒಂದು ಆಫೀಸಿನ ಕೆಲಸಕ್ಕಾಗಿ ಬಾಡಿಗೆ ನಾತೆಯಿಂದ ಕೊಡುವಂತೆ ಕೇಳಿ, ನಂತರ ಒಬ್ಬ ಮಹಿಳೆಯನ್ನು ಸದರಿ ಆಫೀಸಿನವಳು ಎಂದು ಕರೆದುಕೊಂಡು ಬಂದು ಪರಿಚಯ ಮಾಡಿದ ನಂತರ ನನ್ನ ದೊಡ್ಡಮ್ಮ ಅವರಿಗೆ ಚಹಾದ ವ್ಯವಸ್ಥೆ ಮಾಡಿದ್ದಾಗಿ ನನ್ನ ದೊಡ್ಡಮ್ಮ ಅವಳ ಮುಂದೆ ಹೇಳಿದ್ದಾಗಿ ಚಾಸಾ-12 ರವರು ನಮ್ಮ ಮುಂದೆ ಹೇಳಿದಳು. ನಂತರ ನಾನು ಮತ್ತು ನಮ್ಮ ಸಹೋದರರು ಸಂಶಯ ಬಂದು ಆರೋಪಿಯ ಮನೆಗೆ ಹೋಗಿ ನೋಡಿದಾಗ ಮನೆಯಲ್ಲಿ ಯಾರು ಇರದೇ ಅವನ ಮನೆಯ ಬಾಗಿಲು ಬಂದ್ ಆಗಿ ಮನೆಯ ಕೀಲಿ ಹಾಕಲಾಗಿತ್ತು. ಈ ಬಗ್ಗೆ ನಾನು ಪೋಲಿಸರ ಮುಂದೆ ಮರುಹೇಳಿಕೆಯನ್ನು ನೀಡಿರುತ್ತೇನೆ.

ನಂತರ ಪೋಲಿಸರು ನನಗೆ ತಾಃ06.09.2019 ರಂದು ಆರೋಪಿಯನ್ನು ಪತ್ತೆ ಮಾಡಿ ಠಾಣೆಗೆ ಕರೆತಂದಿರುವುದಾಗಿ ಹೇಳಿದರು. ನಂತರ ನಾನು ಮತ್ತು ನಮ್ಮ ಸಹೋದರರು ಠಾಣೆಗೆ ಹೋಗಿರುತ್ತೇವೆ. ಸದರಿ ಠಾಣೆಯಲ್ಲಿ ಆರೋಪಿ ಇದ್ದನು. ಪೋಲಿಸರಿಂದ ನಮಗೆ ಆರೋಪಿ ಮತ್ತು ಅವನ ಹೆಂಡತಿ ನನ್ನ ದೊಡ್ಡಮ್ಮ ಬಂಗಾರದ ಒಡವೆಗಳಿಗಾಗಿ ತಾಃ 16.08.2019 ರಂದು ರಾತ್ರಿ 11.30 ಸುಮಾರಿಗೆ ನನ್ನ ದೊಡ್ಡಮ್ಮನನ್ನು ಮಾತನಾಡಿಸುವ ನೆಪ ಮಾಡಿಕೊಂಡು ಅವಳು ವಾಸವಿದ್ದ ಮನೆಗೆ ಹೋಗಿ ನನ್ನ ದೊಡ್ಡಮ್ಮಳ ಎರಡು ಕೈಗಳನ್ನು ಮಂಚಕ್ಕೆ ಕಟ್ಟಿ , ಕುತ್ತಿಗೆಗೆ ಮತ್ತು ಕಣ್ಣಿಗೆ ಸೀರೆ ಕಟ್ಟಿ, ತಲೆದಿಂಬನ್ನು ನನ್ನ ದೊಡ್ಡಮ್ಮಳ ಮುಖಕ್ಕೆ ಒತ್ತಿಹಿಡಿದು ಬಂಗಾರದ ಆಭರಣಗಳಿಗಾಗಿ ಸಾಯಿಸಿದ ಬಗ್ಗೆ ಗೊತ್ತಾಯಿತು. ಈ ಬಗ್ಗೆ ನಾನು ಪೋಲಿಸರ ಮುಂದೆ ಇನ್ನೊಂದು ಮರುಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಗೆ ನಿಪಿ-12 ರಿಂದ 16 ಪೊಟೊಗಳನ್ನು ತೋರಿಸಿದಾಗ ಸದರಿ ಪೊಟೊಗಳ ಪೈಕಿ ಒಂದು ಪೊಟೊದಲ್ಲಿ 4 ಬಂಗಾರದ ಬಳೆಗಳು ಇದ್ದು, ಇನ್ನೊಂದು ಪೊಟೊಗಳಲ್ಲಿ 2 ಬಂಗಾರದ ಬಳೆಗಳು ಇದ್ದು, ಇನ್ನೊಂದು ಪೊಟೊಗಳಲ್ಲಿ ಲಾಕೇಟ ಇರುವ ಬಂಗಾರದ ಸರವನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ. ಸದರಿ ಪೊಟೊಗಳಲ್ಲಿರುವ ವಸ್ತುಗಳನ್ನು ಈಗಾಗಲೆ ಮುಮಾ-1 ರಿಂದ 3 ಎಂದು ಗುರುತಿಸಲಾಗಿದೆ.

ಸಾಕ್ಷಿಗೆ ಮುಮಾ-4 ರಿಂದ 16 ಗಳನ್ನು ತೋರಿಸಿದಾಗ ಸದರಿಯವುಗಳು ತನ್ನ ದೊಡ್ಡಮ್ಮಳಿಗೆ ಸೇರಿದ ಬಟ್ಟೆಗಳು, ಹಾಸಿಗೆ , ತಲೆದಿಂಬು, ದೀಪ, ಬೆಂಕಿಪೊಟ್ಟಣ , ಸ್ವೇಟರ್ , ಸ್ಕಾರ್ಫ್ , ಬ್ಲೌಸ್ , ಲಂಗ, ಸ್ವಲ್ಪ ಒಡೆದ ಬಳೆಯ ಚೂರುಗಳು ಎಂದು ಗುರುತಿಸುತ್ತಾರೆ. ನಾನು ಠಾಣೆಯಲ್ಲಿ ನೋಡಿದ ಆರೋಪಿಯು ಈಗ ನ್ಯಾಯಾಲಯದ ಮುಂದೆ ಇರುತ್ತಾನೆ. ಆರೋಪಿಯು ಈಗ ನ್ಯಾಯಾಲಯದ ಮುಂದೆ ಇರುತ್ತಾನೆ.

ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿ ಸಮಯಾವಕಾಶ ಕೇಳಿದ್ದು **,** ಸಮಯಾವಕಾಶ ನಿಡಲಾಯ್ತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ**.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.